20/10/22 ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ಯಾವ ಭಾರತ ಸಾಹುಕಾರ ಆಗಿತ್ತು, ಅದೇ ಭಾರತ ಈಗ ಬಡ ಭಾರತ ಆಗಿಬಿಟ್ಟಿದೆ, ತಂದೆಯೇ ಬಂದು ಈ ಬಡ ಭಾರತವನ್ನು ಪುನಃ ಸಾಹುಕಾರವನ್ನಾಗಿ ಮಾಡುತ್ತಾರೆ"

ಪ್ರಶ್ನೆ: ನೀವು ಗೋಪ-ಗೋಪಿಕೆಯರಲ್ಲಿ ಎಲ್ಲರಿಗಿಂತ ಅದೃಷ್ಟವಂತರು ಯಾರು ಮತ್ತು ಹೇಗೆ?

ಉತ್ತರ: ಯಾರು ಈಶ್ವರೀಯ ನರ್ತನ (ಗಾಡ್ಲಿ ಡಾನ್ಸ್) ಮಾಡುತ್ತಾರೋ ಅವರೇ ಪುನಃ ಸತ್ಯಯುಗದಲ್ಲಿ ಹೋಗಿ ರಾಜ-ರಾಜಕುಮಾರಿಯರ ಜೊತೆ ನರ್ತನ ಮಾಡುತ್ತಾರೆ. ಅಂತಹ ಅದೃಷ್ಟವಂತ ಮಕ್ಕಳೇ ಈಗ ತಂದೆಯ ಮೇಲೆ ಪೂರ್ತಿ ಬಲಿ ಆಗುತ್ತಾರೆ, ಬಾಬಾ ನಾನು ನಿನ್ನವನು, ನನ್ನದು ಏನೂ ಇಲ್ಲ. ನೀವು ನಮ್ಮನ್ನು ಸ್ವರ್ಗಕ್ಕೆ ಮಾಲೀಕರನ್ನಾಗಿ ಮಾಡುತ್ತೀರೆಂದಾಗ ನಾನು ಏಕೆ ಬಲಿಹಾರಿ ಆಗಬಾರದು.

ಓಂ ಶಾಂತಿ. ಹೇ ಭಾರತವಾಸಿ ಮಕ್ಕಳೇ, ಎಂತಹ ಮಕ್ಕಳಾಗಿದ್ದೀರಿ? ಯಾರು ದೇವತೆಗಳಿಗೆ ಪೂಜಾರಿ ಆಗಿದ್ದೀರಿ ಎಂದು ತಂದೆ ಮಕ್ಕಳಿಗೆ ತಾಳ್ಮೆ ಕೊಡುತ್ತಿದ್ದಾರೆ. ಅವರು ನಮ್ಮ ಇಷ್ಟ ದೇವರು ದೊಡ್ಡ ದೇವತೆ ಎಂದು ಒಪ್ಪಿಕೊಳ್ಳುತ್ತಾರೆ. ಕ್ರಿಶ್ಚಯನ್ನರು ಕ್ರೈಸ್ತನಿಗೆ ಪೂಜೆ ಮಾಡುತ್ತಾರೆ. ಬೌದ್ಧರು ಬುದ್ಧನಿಗೆ ಪೂಜೆ ಮಾಡುತ್ತಾರೆ. ಜೈನರು ಮಹಾವೀರನಿಗೆ ಪೂಜೆ ಮಾಡುತ್ತಾರೆ. ಪ್ರತಿಯೊಬ್ಬರು ತಮ್ಮ-ತಮ್ಮ ಧರ್ಮದ ದೊಡ್ಡವರಿಗೆ ಪೂಜೆ ಮಾಡುತ್ತಾರೆ ಅಥವಾ ನೆನಪು ಮಾಡುತ್ತಾರೆ. ದೇವೀ ದೇವತೆಗಳ ಮಂದಿರಗಳಿದೆ. ಅದರಲ್ಲಿ ಶಿವನ ಮಂದಿರವೂ ಸಹ ಬರುತ್ತದೆ. ಅವರು ನಿರಾಕಾರನಾಗಿದ್ದಾರೆ. ಬ್ರಹ್ಮಾ-ವಿಷ್ಣು-ಶಂಕರ ಆಕಾರಿ ಆಗಿದ್ದಾರೆ ಮತ್ತು ಲಕ್ಷ್ಮೀ-ನಾರಾಯಣ, ಸೀತಾ-ರಾಮ, ಜಗದಾಂಬ, ಜಗತ್ಪಿತ ಸಾಕಾರವಾಗಿದ್ದಾರೆ. ಈ ವಿಷಯಗಳು ಪ್ರಪಂಚದವರಿಗೆ ಗೊತ್ತಿಲ್ಲ. ಅಂದಾಗ ಯಾರು ದೇವತೆಗಳ ಪೂಜಾರಿ ಆಗಿದ್ದಾರೋ ಅವರಿಗಾಗಿ ತಂದೆ ತಾಳ್ಮೆಯಿಂದ ಇರಿ ಈಗ ಸ್ವರ್ಗದ ಸ್ಥಾಪನೆ ಆಗುತ್ತಿದೆ ಎಂದು ಹೇಳುತ್ತಾರೆ. ಭಾರತ ಸ್ವರ್ಗವಾಗಿತ್ತು. ಲಕ್ಷ್ಮೀ-ನಾರಾಯಣರ ರಾಜ್ಯಕ್ಕೆ ಸ್ವರ್ಗ ಎಂದು ಕರೆಯಲಾಗುತ್ತದೆ. ಲಕ್ಷ್ಮೀ-ನಾರಾಯಣರ ರಾಜ್ಯಕ್ಕೆ 5000 ವರ್ಷಗಳಾಗಿದೆ. ಸೀತಾರಾಮರಿಗೆ 3750 ವರ್ಷಗಳಾಗಿದೆ. ಇದು ನೀವು ಬ್ರಹ್ಮಾ ಮುಖವಂಶಾವಳಿ ಬ್ರಾಹ್ಮಣರೇ ತಿಳಿದುಕೊಂಡಿದ್ದೀರಿ. ಪ್ರಪಂಚದವರು ಅಂಧಕಾರದಲ್ಲಿರುವ ಕಾರಣ ಬುದ್ಧಿಹೀನರಾಗಿದ್ದಾರೆ. ನಿಮಗೆ ಒಬ್ಬ ಲೌಕಿಕ ತಂದೆ ಇನ್ನೊಬ್ಬರು ಪಾರಲೌಕಿಕ ತಂದೆ ಎಂದು ಅವರಿಗೆ ತಿಳಿಸಬೇಕು. ಅವರು ಹೊಸ ಪ್ರಪಂಚದ ರಚಯಿತನಾಗಿದ್ದಾರೆ. ತಂದೆ ಹೊಸ ಮನೆ ಮಾಡುತ್ತಾರಲ್ಲವೇ. ಬೇಹದ್ದಿನ ತಂದೆ ಹೊಸ ಸೃಷ್ಟಿಯನ್ನು ಮಾಡುತ್ತಾರೆ. ಈಗ ಆ ಭಾರತಿವಾಸಿಯರೇ ಧರ್ಮ ಭ್ರಷ್ಟರಾಗಿಬಿಟ್ಟಿದ್ದಾರೆ. ಸರ್ವಗುಣ ಸಂಪನ್ನರುಎಂದು ದೇವತೆಗಳಿಗೆ ಮಹಿಮೆ ಮಾಡುತ್ತಾರೆ, ಈ ಮಹಿಮೆ ಬೇರೆ ಧರ್ಮದವರು ಮಾಡುವುದಿಲ್ಲ. ಯಾವುದೇ ಧರ್ಮದವರು ತಮ್ಮ ಇಷ್ಟ ದೇವತೆಗೆ ಅಂತಹ ಮಹಿಮೆ ಮಾಡುವುದಿಲ್ಲ. ನಿಮಗೆ ದೇವತೆಗಳ ಭಕ್ತರೂ ಸಿಗುವುದು ಲಕ್ಷ್ಮೀ-ನಾರಾಯಣ ಮಂದಿರದಲ್ಲಿ. ಶ್ರೀ ಕೃಷ್ಣನ ಭಕ್ತರು ಕೃಷ್ಣನ ಮಂದಿರದಲ್ಲಿ ಸಿಗುತ್ತಾರೆ. ಲಕ್ಷ್ಮೀ-ನಾರಾಯಣರು ಸತ್ಯಯುಗದಲ್ಲಿ ಭಾರತಕ್ಕೆ ಮಾಲೀಕರಾಗಿದ್ದರು. ಭಾರತವಾಸಿಯರು ಸತ್ಯಯುಗದಲ್ಲಿ ಮಾಲೀಕರಾಗಿದ್ದರು. ಆದಿ ಸನಾತನ ದೇವೀ ದೇವತಾ ಧರ್ಮವಿದ್ದಾಗ ಭಾರತ ಬಹಳ ಸಾಹುಕಾರ ಶ್ರೀಮಂತವಾಗಿತ್ತು. ಇದು ಭಾರತದ ಪ್ರಾಚೀನ ಸಹಜ ರಾಜಯೋಗ ಹಾಗೂ ಸಹಜ ಜ್ಞಾನವಾಗಿದೆ. ದೇವೀ-ದೇವತಾ ಧರ್ಮ ಹಳೆಯದಾಗಿದೆ. ಆದರೆ ದೇವೀ-ದೇವತಾ ಧರ್ಮದ ಸ್ಥಾಪನೆ ಯಾರು ಮಾಡಿದ್ದಾರೆ ಎಂದು ಮನುಷ್ಯರು ಮರೆತುಬಿಟ್ಟಿದ್ದಾರೆ. ನೀವು ಸಂಗಮಯುಗಿ ಬ್ರಾಹ್ಮಣರಾಗಿದ್ದೀರಿ ಎಂದು ತಂದೆ ತಿಳಿಸಿದ್ದಾರೆ. ನಾವು ಪ್ರಜಾಪಿತ ಬ್ರಹ್ಮನ ವಂಶಾವಳಿ ಎಂದು ಕಲಿಯುಗೀ ಬ್ರಾಹ್ಮಣರೆಂದೂ ಸಹ ಹೇಳುತ್ತಾರೆ. ಆದರೆ ಬ್ರಹ್ಮಾ ಯಾವಾಗ ಬಂದಿದ್ದಾರೆ ಎಂದು ಅವರಿಗೆ ಗೊತ್ತಿಲ್ಲ. ಈಗ ನೀವು ಪ್ರತ್ಯಕ್ಷವಾಗಿದ್ದೀರಿ. ಲಕ್ಷ್ಮೀ-ನಾರಾಯಣರು ಈ ಭಾರತದಲ್ಲಿಯೇ ರಾಜ್ಯ ಮಾಡಿ ಹೋದರು ಎಂದು ನಿಮಗೆ ಗೊತ್ತಿದೆ. ಅವರಿಗಿಂತ ಶ್ರೇಷ್ಠ ಮನುಷ್ಯರು ಯಾರೂ ಇಲ್ಲ. ಸತ್ಯಯುಗಕ್ಕೆ ಎಷ್ಟು ವರ್ಷಗಳು ಎಂದು ಮನುಷ್ಯರಿಗೆ ಗೊತ್ತೇ ಇಲ್ಲ. ಅವರು ಸತ್ಯಯುಗದ ಆಯಸ್ಸನ್ನು ಎಷ್ಟು ದೊಡ್ಡದನ್ನಾಗಿ ತೋರಿಸುತ್ತಾರೆ. ಶಾಸ್ತ್ರವನ್ನು ಮಾಡುವವರು ತಮ್ಮ ಮತವನ್ನು ಹಾಕಿಬಿಟ್ಟಿದ್ದಾರೆ. ಭಾರತ ವಾಸ್ತವಿಕವಾಗಿ ದೇವೀ-ದೇವತಾ ಧರ್ಮದ್ದಾಗಿತ್ತು ಎಂಬುದು ತಂದೆ ಮಕ್ಕಳಿಗೆ ತಿಳಿಸುತ್ತಾರೆ. ನೀವು ಬಹಳ ಜನ್ಮಗಳ ನಂತರ ಕೊನೆಯ ಜನ್ಮದಲ್ಲಿ ಅವಶ್ಯವಾಗಿ ಇಲ್ಲಿಗೆ ಬರಬೇಕು. ಈ ವರ್ಣಗಳು ಭಾರತವಾಸಿ ದೇವೀ-ದೇವತೆಯರದು. ಹಿಂದಿನವರು ಯಾವುದೇ ಧರ್ಮದವರಲ್ಲ. ಈಗ ನೀವು ಬ್ರಹ್ಮಾ ವಂಶಿ ಬ್ರಾಹ್ಮಣರಾಗಿದ್ದೀರಿ. ನೀವು ಪೂಜಾರಿಯಿಂದ ಪೂಜ್ಯರಾಗುತ್ತಿದ್ದೀರಿ. ನೀವು ಮಾತೆಯರಿಗೆ ಭಾರತಮಾತ ಶಕ್ತಿಯ ಅವತಾರ ಎಂದು ಕರೆಯಲಾಗುತ್ತದೆ. ಜಗದಾಂಬನಿಗೂ ಸಹ ಅವತಾರ ಎಂದು ಹೇಳುತ್ತಾರೆ. ಈ ಸಂಗಮಯುಗದಲ್ಲಿ ಶಿವಬಾಬಾ ಅವತಾರ ಪಡೆದುಕೊಂಡಿದ್ದಾರೆ. ನಿಮ್ಮನ್ನು ತನ್ನ ಮಕ್ಕಳನ್ನಾಗಿ ಮಾಡಿಕೊಂಡಿದ್ದಾರೆ.

ಪರಮಪಿತ ಪರಮಾತ್ಮ ಯಾರು ಸರ್ವ ಆತ್ಮರಿಗೆ ತಂದೆಯಾಗಿದ್ದಾರೆ ಅವರು ಬ್ರಹ್ಮಾಂಡಕ್ಕೆ ಮಾಲೀಕರಾಗಿದ್ದಾರೆಂದು ನೀವು ಮಕ್ಕಳಿಗೆ ಗೊತ್ತಿದೆ. ಅವರಿಗೆ ಸೃಷ್ಟಿಯ ಮಾಲೀಕರೆಂದು ಹೇಳಲು ಸಾಧ್ಯವಿಲ್ಲ. ಭಲೆ ತಂದೆ ಆಗಿದ್ದಾರೆ ಆದರೆ

ಮಾಲೀಕರಾಗುವುದಿಲ್ಲ. ಇದೂ ಸಹ ಗುಹ್ಯ ಮಾತಾಗಿದೆ. ಅವರು ರಚಯಿತನಾಗಿದ್ದಾರೆ ಅಂದಾಗ ರಚನೆಗೆ ಮಾಲೀಕರಾಗಬೇಕಾಗಿದೆ. ಆದರೆ ನಾನು ಏನು ಸ್ವರ್ಗ ಸ್ಥಾಪನೆ ಮಾಡುತ್ತೇವೆಯೋ ಅದರ ಮಾಲೀಕನಾಗುವುದಿಲ್ಲ ಎಂದು ತಂದೆ ಹೇಳುತ್ತಾರೆ. ನೀವು ಮಕ್ಕಳನ್ನು ಮಾಲೀಕರನ್ನಾಗಿ ಮಾಡುತ್ತೇನೆ. ಪ್ರಪಂಚದಲ್ಲಿ ಎಲ್ಲರೂ ಭಗವಂತ ಸೃಷ್ಟಿಗೆ ಮಾಲೀಕ ಎಂದು ಹೇಳುತ್ತಾರೆ. ಆದರೆ ಅವರು ರಚನೆ ಮಾಡಲು ಮಾಲೀಕರಾಗಿದ್ದಾರೆ. ಆದರೆ ಸ್ವರ್ಗಕ್ಕೆ ಮಾಲೀಕರು ನೀವೇ ಆಗುತ್ತೀರಿ. ಮಕ್ಕಳನ್ನು ತಲೆಯ ಮೇಲೆ ಕೂರಿಸುಕೊಳ್ಳುವುದೇ ತಂದೆಯ ಕೆಲಸವಾಗಿದೆ. ತಂದೆ ಸೇವಾಧಾರಿ ಯಲ್ಲವೇ. ಮಕ್ಕಳಿಗೆ ಎಲ್ಲವನ್ನು ಕೊಟ್ಟುಬಿಟ್ಟು ಹೊರಟುಹೋಗುತ್ತೇನೆ. ನಮ್ಮನ್ನು ಯೋಗ್ಯರನ್ನಾಗಿ ಮಾಡಿ, ಹೊಸ ಸೃಷ್ಟಿ ರಚನೆ ಮಾಡಿ ಅದಕ್ಕೆ ಮಾಲೀಕರನ್ನಾಗಿ ಮಾಡಿ ನಾನು ರಿಟೈರ್ ಆಗಿಬಿಡುತ್ತೇನೆ ಎಂದು ತಂದೆ ಹೇಳುತ್ತಾರೆ. ನೀವೂ ಸಹ ಬ್ರಹ್ಮಾಂಡಕ್ಕೆ ಮಾಲೀಕರು ಎಂದು ಕರೆಯಲಾಗುತ್ತದೆ ಏಕೆಂದರೆ ಬ್ರಹ್ಮಾಂಡಕ್ಕೆ ಮಾಲೀಕನ ಮಕ್ಕಳಾಗಿದ್ದೀರಿ. ನೀವೂ ಬ್ರಹ್ಮ ಮಹಾತತ್ವಕ್ಕೆ ಹೋದಾಗ ಬ್ರಹ್ಮಾಂಡಕ್ಕೆ ಮಾಲೀಕರು ಎನ್ನುತ್ತಾರೆ. ಅಲ್ಲಿ ನೀವು ಆತ್ಮರು ಭಲೆ ಚೈತನ್ಯವಾಗಿರುತ್ತೀರಿ ಆದರೆ ಇಂದ್ರಿಯಗಳು ಇರುವುದಿಲ್ಲ. ಯಾವಾಗ ಪರಮಧಾಮದಲ್ಲಿ ಇದ್ದೀರೋ ಬ್ರಹ್ಮಾಂಡಕ್ಕೆ ಮಾಲೀಕರಾಗಿದಿರಿ ನಂತರ ಸೃಷ್ಟಿಗೆ ಮಾಲೀಕರಾಗುತ್ತೀರಿ. ಪುನಃ ನೀವು ರಾಜ್ಯಭಾಗ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಈ ಜ್ಞಾನ ದೇವತೆಗಳಿಗೆ ಅಥವಾ ಶೂದ್ರರಿಗೆ ಇರಲು ಸಾಧ್ಯವಿಲ್ಲ. ಈ ಜ್ಞಾನ ಕೇವಲ ನೀವು ಬ್ರಾಹ್ಮಣರಿಗಷ್ಟೇ. ತಂದೆ ಎಷ್ಟು ಗುಹ್ಯ ಮಾತುಗಳನ್ನು ತಿಳಿಸುತ್ತಾರೆ. ನಿಮ್ಮದೇ ಹೀರೋ ಪಾರ್ಟ್ ಆಗಿದೆ ಎಂದು ಹೇಳುತ್ತಾರೆ. ಜಗದಾಂಬ ಜ್ಞಾನ-ಜ್ಞಾನೇಶ್ವರಿಯಾಗಿದ್ದಾರೆ. ನಂತರ ರಾಜ-ರಾಜೇಶ್ವರಿ ಆಗುತ್ತಾರೆ. ತತ್ವಂ. ಕೇವಲ 2-4 ಪಾರ್ಟ್ ಇರುತ್ತದೆ ಎಂದಲ್ಲ. ಸೃಷ್ಟಿಯ ರಾಜ್ಯವನ್ನು ಪಡೆದುಕೊಳ್ಳುವುದು ಕಳೆದುಕೊಳ್ಳುವುದು ಭಾರತವಾಸಿಯರ ಆಟವಾಗಿದೆ. ಭಾರತವಾಸಿಯರೇ ಸೃಷ್ಟಿಗೆ ಮಾಲೀಕರಾಗಿದ್ದವರು ಈಗ ಕಂಗಾಲರಾಗಿದ್ದಾರೆ. ಅಪವಿತ್ರ ರಾಜರಿಗೂ ಸಹ ರಾಜ್ಯವಿಲ್ಲ, ಪಂಚಾಯಿತಿ ರಾಜ್ಯವಾಗಿದೆ. ಧರ್ಮ ಶಕ್ತಿ ಆಗಿದೆ ಎಂದು ಹೇಳುತ್ತಾರೆ, ತಂದೆ ದೇವೀ-ದೇವತಾ ಧರ್ಮದ ಸ್ಥಾಪನೆ ಮಾಡಿತ್ತಿದ್ದಾರೆ. ಎಷ್ಟು ಶಕ್ತಿ ಕೊಡುತ್ತಾರೆ ನಾವು ಸೃಷ್ಟಿಗೆ ಮಾಲೀಕರಾಗಿಬಿಡುತ್ತೇವೆ. ಭಾರತದಲ್ಲಿ ಅನೇಕ ಧರ್ಮಗಳಿದೆ, ಗುಜರಾತಿನವರು ನಾವು ಗುಜರಾತಿ ಎಂದು ಹೇಳುತ್ತಾರೆ. ಸತ್ಯಯುಗದಲ್ಲಿ ಒಂದೇ ಧರ್ಮ ಇತ್ತು. ತಂದೆ ನಾನು ಪುನಃ ನಿಮಗೆ ಜ್ಞಾನ ತಿಳಿಸುತ್ತೇನೆಂದು ಹೇಳುತ್ತಾರೆ. ಎಲ್ಲಿಯವರೆವಿಗೂ ಬದುಕಿರುತ್ತೇವೆಯೋ ಅಲ್ಲಿಯವರೆವಿಗೂ ಜ್ಞಾನಾಮೃತವನ್ನು ಕುಡಿಯಬೇಕು. ಅನೇಕ ಜನ್ಮಗಳ ಹೊರೆ ಇದೆ ಅದನ್ನು ಇಳಿಸಿಕೊಳ್ಳಬೇಕು. ಅವರಂತೂ ಯುದ್ಧದ ಮೈದಾನವನ್ನು ತೋರಿಸಿದ್ದಾರೆ, ಕೃಷ್ಣನ ಹೆಸರು ಹಾಕಿಬಿಟ್ಟಿದ್ದಾರೆ. ನಿಮ್ಮ ರಥದಲ್ಲಿ (ಬ್ರಹ್ಮಾರವರಲ್ಲಿ) ಪ್ರವೇಶ ಮಾಡಿ ಮಾಯೆಯ ಮೇಲೆ ಜಯಗಳಿಸಲು ನಿಮ್ಮನ್ನು ಯುದ್ಧದ ಮೈದಾನದಲ್ಲಿ ನಿಲ್ಲಿಸುತ್ತೇನೆ ಎಂದು ತಂದೆ ಹೇಳುತ್ತಾರೆ. ಜೊತೆ-ಜೊತೆಯಲ್ಲಿ ಮಕ್ಕಳನ್ನೂ ಸಹ ನಿಲ್ಲಿಸುತ್ತೇನೆ. ಮಾಯಾಜೀತರಾಗಿ ಸ್ವರ್ಗಕ್ಕೆ ಮಾಲೀಕರಾಗುತ್ತೇವೆಂದು ನಿಮಗೆ ಗೊತ್ತಿದೆ. ಮನುಷ್ಯರು ಸಿಪಾಯಿಗಳಿಗೆ ಯುದ್ಧ ಮಾಡುವವರೆಂದು ಹೇಳುತ್ತಾರೆ, ರಾತ್ರಿ-ಹಗಲಿನ ಅಂತರವಿದೆ. ನೀವು ಮಂದಿರಕ್ಕೆ ಹೋಗಿ ಸರ್ವೀಸ್ ಮಾಡಬೇಕಾಗಿದೆ. ಈ ಲಕ್ಷ್ಮೀ-ನಾರಾಯಣರೇ ಭಾರತಕ್ಕೆ ಮಾಲೀಕರಾಗಿದ್ದರು ಎಂದು ಅವರಿಗೆ ತಿಳಿಸಿ. ನಂತರ ಭಾರತವಾಸಿಯರು ಸ್ವರ್ಗಕ್ಕೆ ಮಾಲೀಕರಾಗಿದ್ದರು ಎನ್ನುವ ಸ್ಲೋಗನ್ ತಯಾರು ಮಾಡಿ. ಈಗ ಆಸ್ತಿಯನ್ನು ಕಳೆದುಕೊಂಡಿದ್ದೀರಿ. ಶಾಸ್ತ್ರದಲ್ಲಿ ಕೃಷ್ಣ ಹಾಗೂ ಮಹಾಭಾರತದ ಯುದ್ಧವನ್ನು ತೋರಿಸಿಬಿಟ್ಟಿದ್ದಾರೆ. ಭಕ್ತಿಯಲ್ಲಿ ಭಗವಂತನನ್ನು ಮಿಲನ ಮಾಡಲು ಸಾಧನೆ ಮಾಡುತ್ತಾರೆ. ಬಂದು ಮಾಯಾ ರಾವಣನಿಂದ ಮುಕ್ತರನ್ನಾಗಿ ಮಾಡಿ ಎಂದು ಕರೆಯುತ್ತಾರೆ. ಎಷ್ಟು ಹಾಹಾಕಾರ ಹರಡಿದೆ. ಯುದ್ಧ ಆರಂಭವಾದರೆ ಊಟ, ಬಟ್ಟೆ, ಏನೂ ಸಿಗುವುದಿಲ್ಲ. ಬಾಂಬೆಗೆ ಭಾರತದ ರಾಣಿ (ಕ್ವೀನ್ ಆಫ್ ಇಂಡಿಯಾ) ಎಂದು ಹೇಳುತ್ತಾರೆ ಏಕೆಂದರೆ ಅವರಿಗೆ ಸ್ವರ್ಗದ ಸುಖದ ಬಗ್ಗೆ ಗೊತ್ತಿಲ್ಲ. ನಮಗೆ ಗೊತ್ತಿದ್ದರೆ ನಾವು ಆಂತರಿಕವಾಗಿ ನರ್ತನ ಮಾಡುತ್ತಿರುತ್ತೇವೆ. ಜ್ಞಾನಕ್ಕೆ ಸದ್ಗತಿ ಎಂದು ಕರೆಯಲಾಗುತ್ತದೆ. ಎಂತಹ ಜ್ಞಾನ? ಸೃಷ್ಟಿಯ ಆದಿ-ಮಧ್ಯ-ಅಂತ್ಯದ ಜ್ಞಾನ. ಈಗ ನೀವು ಎಲ್ಲರಿಗೆ ಹೇಗೆ ತಿಳಿಸುವುದು ಎಂದು ಈಗ ನೀವು ಬುದ್ಧಿಯಿಂದ ಕೆಲಸ ಮಾಡಿ. ದೇವತೆಗಳು ಯಾರು ಪಾವನರಾಗಿದ್ದವರು ಈಗ ಪತಿತರಾಗಿಬಿಟ್ಟಿದ್ದಾರೆ, ಅವರನ್ನು ಹುಡುಕಬೇಕು. ಅವರು ಮಂದಿರದಲ್ಲಿ ಬೇಗ ಸಿಗುತ್ತಾರೆ, ಅವರೂ ಸಹ ಖುಷಿ ಆಗುತ್ತಾರೆ. ಜಗದಾಂಬನ ಮಂದಿರ ಕೆಳಗಿದೆ ವಾಸ್ತವಿಕವಾಗಿ ಎರಡೂ ಒಟ್ಟಿಗೆ ಇರಬೇಕು. ಬ್ರಹ್ಮನ ಮಗಳು ನಂಬರ್ವನ್ ರಾಜಕುಮಾರಿ ಆಗುತ್ತಾರೆಂದು ನಿಮಗೆ ಗೊತ್ತಿದೆ. ನೀವು ಜಗದಾಂಬನ 84 ಜನ್ಮಗಳ ಚರಿತ್ರೆಯನ್ನು ತಿಳಿಸಬಹುದು. ನಿಮಗೆ ಶಿವಬಾಬಾನ ಚರಿತ್ರೆಯೂ ಸಹ ಗೊತ್ತಿದೆ. ಅವರು ಕಲ್ಲು-ಮುಳ್ಳಲ್ಲಿ ಇದ್ದಾರೆಂದಲ್ಲ. ಮುಂಚೆ ನಾವೂ ಸಹ ಈ ರೀತಿ ತಿಳಿದುಕೊಂಡಿದ್ದೆವು. ಮುಂಚೆ ತಮ್ಮನು ಬಹಳ ಶ್ರೇಷ್ಠರು ಎಂದು ತಿಳಿದಿದ್ದಿರಿ. ಎಲ್ಲದಕ್ಕಿಂತ ರತ್ನಗಳ ವ್ಯಾಪಾರ ಶ್ರೇಷ್ಠ, ಅದಕ್ಕಿಂತಲೂ ಜ್ಞಾನ-ರತ್ನಗಳ ವ್ಯಾಪಾರ ಶ್ರೇಷ್ಠವಾಗಿದೆ. ನೀವು 9 ರತ್ನಗಳ ಉಂಗುರವನ್ನು ಧರಿಸುತ್ತೀರಿ. ಅದೂ ಸಹ ಇದಕ್ಕೆ ಹೋಲಿಕೆ ಮಾಡಬಹುದು. ಮುಂಚೆ ನಮಗೆ ಏನೂ ಗೊತ್ತಿರಲಿಲ್ಲ. ಬ್ರಹ್ಮಾಂಡಕ್ಕೆ ಮಾಲೀಕರು, ಸೃಷ್ಟಿ ರಚೈತ ತಂದೆ ಆಗಿದ್ದಾರೆ ಎಂದು ಮುಖ್ಯ ಮಾತು ಇಂದು ತಿಳಿಸಲಾಗಿದೆ. ಅವರು ರಾಜ್ಯ ಮಾಡುವುದಿಲ್ಲ. ರಾಜ್ಯವನ್ನು ನಾವು ಮಕ್ಕಳಿಗೆ ಕೊಡುತ್ತಾರೆ. ನಾವೇ ರಾಜ್ಯವನ್ನು ತೆಗೆದುಕೊಳ್ಳಬೇಕು ಹಾಗೂ ಕಳೆದುಕೊಳ್ಳಬೇಕು. ಇಷ್ಟಾದರೂ ತಿಳಿದುಕೊಂಡಿರಬೇಕು. ಕಳೆದುಕೊಂಡಿರುವ ರಾಜ್ಯದಲ್ಲಿ ಎಷ್ಟು ಜನ್ಮಗಳನ್ನು ಪಡೆದುಕೊಂಡಿದ್ದೀರಿ? ನಂತರ ನಿಮ್ಮ ರಾಜ್ಯದಲ್ಲಿ ಎಷ್ಟು ಜನ್ಮಗಳನ್ನು ಪಡೆದುಕೊಳ್ಳುತ್ತೀರಿ? ಮತ್ತೆ ಇನ್ನೇನು ಬೇಕು. ಮನುಷ್ಯರು ದೇಹಾಭಿಮಾನಿ ಆಗಿರುವ ಕಾರಣ ಉಲ್ಟಾ ಆಗಿ ಸಿಕ್ಕಿಹಾಕಿಕೊಂಡಿದ್ದಾರೆ. ಈಗ ನೀವು ಸುಲ್ಟಾ ಆಗಿದ್ದೀರಿ. ಮನುಷ್ಯರು ಯಾವಾಗ ಸತ್ತು ಹೋಗುತ್ತಾರೋ ಅಗ ಮುಖವನ್ನು ತಿರುಗಿಸುತ್ತಾರೆ. ಈಗ ನಮ್ಮ ಮುಖ ಪರಮಧಾಮದ ಕಡೆ ಇದೆ. ಈ ಶರೀರವನ್ನು ಬಿಟ್ಟು ನಾವು ಸೀಧಾ ಹೊರಟುಹೋಗುತ್ತೇವೆ. ಒಳ್ಳೆಯದು ಮನ್ಮನಾಭವ ಎಂದು ತಂದೆ ಹೇಳುತ್ತಾರೆ. ನನ್ನನ್ನು ನೆನಪು ಮಾಡುವುದರಿಂದ ನೀವು ನನ್ನ ಹತ್ತಿರ ಬರುತ್ತೀರಿ. ಇಲ್ಲಿ

ಬೇಹದ್ದಿನ ಕ್ಲಾಸ್ ಚೆನ್ನಾಗಿರುತ್ತದೆ. ಒಳಗಡೆ ರೂಮಿನಲ್ಲಿ ಬಾಬನಿಗೆ ಗರ್ಭಜೈಲ್ ಹಾಗೆ ಎನ್ನಿಸುತ್ತದೆ. ಬೇಹದ್ದಿನ ತಂದೆಗೆ ಬೇಹದ್ದಲ್ಲೇ ಬೇಕು. ಇಷ್ಟು ದೊಡ್ಡ ತಂದೆ ಬೇಹದ್ದಿನ ಮಾಲೀಕ ನಿಮ್ಮ ಸೇವೆ ಮಾಡಲು ಈ ಹದ್ದಿನ ಶರೀರದಲ್ಲಿ ಬರುತ್ತಾರೆ. ಪತಿತ ಶರೀರ, ಪತಿತ ಪ್ರಪಂಚದಲ್ಲಿ ಬರಬೇಕಾಗುತ್ತದೆ. ನೀವು ಮಕ್ಕಳನ್ನು ಪತಿತರಿಂದ ಪಾವನರನ್ನಾಗಿ ಮಾಡಿ, ಸ್ವರ್ಗಕ್ಕೆ ಮಾಲೀಕರನ್ನಾಗಿ ಮಾಡಿ ಹೊರಟು ಹೋಗುತ್ತೇನೆಂದು ತಂದೆ ಹೇಳುತ್ತಾರೆ. ಈಗ ಹೆಚ್ಚುಕಡಿಮೆ ಆಗುತ್ತದೆ. ಕೆಲವರು ಯಾರು ಜ್ಞಾನದಲ್ಲಿ ಪರಿಪಕ್ವ ಆಗಿರುವುದಿಲ್ಲವೋ ಅವರಿಗೆ ನೋಡಿದಾಗಲೇ ಪ್ರಾಣ ಹೋಗುತ್ತದೆ. ಯಾರಾದರೂ ಸಾಯುವುದು ನೋಡಿದರೆ ಕೆಲವರಿಗೆ ದೊಡ್ಡ ಷಾಕ್ ಆಗುತ್ತದೆ ಹಾಗೂ ಸತ್ತು ಹೋಗುತ್ತಾರೆ. ನೀವಂತೂ ಬಹಳ ಶಕ್ತಿಶಾಲಿ ಆಗಬೇಕು. ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣ ಸಂಕಟ ಎಂದು ಗಾಯನವೂ ಇದೆ. ಈಗ ನಾವು ಸ್ವರ್ಗಕ್ಕೆ ಯೋಗ್ಯರಾಗುತ್ತಿದ್ದೇವೆ. ಈ ಯುದ್ಧದ ಮೂಲಕವೇ ಬಾಗಿಲು ತೆರೆಯುತ್ತದೆ. ಈಗ ವಾಪಸ್ ಮನೆಗೆ ಹೋಗೋಣ ಆಟ ಪೂರ್ತಿ ಆಗಿದೆ. ತಂದೆ ಆತ್ಮಿಕ ಧಾಮಕ್ಕೆ ಕರೆದುಕೊಂಡು ಹೋಗಲು ಆತ್ಮಿಕ ಮಾರ್ಗದರ್ಶಕನಾಗಿದ್ದಾರೆ. ಆದ್ದರಿಂದ ಈಗ ತಂದೆಯನ್ನು ನೆನಪು ಮಾಡಿದರೆ ಅಂತ್ಯದಲ್ಲಿ ಒಳ್ಳೆಯ ಗತಿ ಸಿಗುತ್ತದೆ. ಕೆಲ-ಕೆಲವರಿಗೆ ಇಲ್ಲಿ ಬಹಳ ಚಿಕ್ಕ ಜನ್ಮ ಇರುತ್ತದೆ. ಗರ್ಭದಲ್ಲಿ ಬಹಳ ಶಿಕ್ಷೆಯನ್ನು ಭೋಗಿಸುತ್ತಾರೆ. ಹೊರ ಬಂದ ನಂತರವೇ ಮಗು ಸತ್ತುಹೋಗುತ್ತದೆ ನಂತರ ಬೇರೆ ಲೆಕ್ಕಾಚಾರವನ್ನು ಅನುಭವಿಸಬೇಕು. ಮಧುರಾತಿಮಧುರ ಮಕ್ಕಳೇ ಈ ಜ್ಞಾನರತ್ನಗಳನ್ನು ಬುದ್ಧಿಯಲ್ಲಿ ಧಾರಣೆ ಮಾಡಿ ಎಂದು ತಂದೆಯು ತಿಳಿಸುತ್ತಾರೆ. ಮಂದಿರಗಳಲ್ಲಿ ಹೋಗಿ ಸರ್ವೀಸ್ ಮಾಡಿ ಇದಕ್ಕೆ ಪರಿಶ್ರಮ ಎಂದು ಕರೆಯಲಾಗುತ್ತದೆ. ಹೆದರಬೇಡಿ. ಯಾರು ತಮ್ಮ ಧರ್ಮದವರು ಇರುತ್ತಾರೋ ಅವರಿಗೆ ಬಾಣ ತಲುಪುತ್ತದೆ. ಸನ್ಯಾಸಿಗಳ ಹತ್ತಿರ ಹೋಗಿ ನೋಡಬೇಕು. (ಚೇಲು ಹಾಗೆಯೇ) ನೋಡಿ ಕಲ್ಲಾದರೆ ಚೇಲು ಕಚ್ಚುವುದಿಲ್ಲ. ಹಾಗೆಯೇ ಪ್ರಯತ್ನ ಮಾಡಬೇಕು. ಪ್ರಯತ್ನ ಮಾಡುತ್ತಾ-ಮಾಡುತ್ತಾ ಸಫಲತೆ ಸಿಕ್ಕಿಬಿಡುತ್ತದೆ. ಈಗ ಆ ಜ್ಞಾನ ಮತ್ತು ಯೋಗದ ಶಕ್ತಿ ಬರಲಿಲ್ಲ ಆದ್ದರಿಂದ ಸನ್ಯಾಸಿಗಳಿಗೆ, ರಾಜರಿಗೆ ಎಲ್ಲಿ ತಿಳಿಸಿದ್ದೀರಿ. ಜನಕ, ಸನ್ಯಾಸಿಗಳು ಮುಂತಾದವರು ಅಂತ್ಯದಲ್ಲಿಯೇ ಬರುತ್ತಾರೆ. ಅವರಿಗೆ ಜ್ಞಾನ ಕೊಟ್ಟರೆ ಪ್ರಭಾವ ಆಗುತ್ತದೆ. ಆ ಸಮಯದಲ್ಲಿ ನೀವು ಟೂ ಲೇಟ್ ಎಂದು ಹೇಳುತ್ತೀರಿ. ಜೋಳಿಗೆಯನ್ನು ತುಂಬಿಸಲು ತಂದೆ ಬಂದಿದ್ದಾರೆ, ಆದರೆ ತಾವು ಬಂದೇ ಇಲ್ಲ ಎಂದು ನೀವು ಹೇಳುತ್ತೀರಿ. ಹೇಗೆ ಸರ್ವೀಸ್ ಮಾಡಬೇಕೆಂದು ಸದಾ ಯೋಚನೆ ಮಾಡಿ. ನಿಮಂತ್ರಣ ಮುದ್ರಿಸಿ. ಉಪಾಯವನ್ನು ಯೋಚನೆ ಮಾಡಿ. ಸೇವೆಯೂ ಸಹ ಡ್ರಾಮಾನುಸಾರವಾಗಿಯೇ ಆಗುತ್ತದೆ. ನಾವು ಸಾಕ್ಷಿಯಾಗಿ ನೋಡುತ್ತೇವೆ. ಭಗವಾನುವಾಚ ಮಕ್ಕಳ ಪ್ರತಿ, ಗೋಪ-ಗೋಪಿಕೆಯರ ಪ್ರತಿ. ಗೋಪಿವಲ್ಲಭ ಭಗವಂತನಾಗಿದ್ದಾರೆ. ಅವರು ತಂದೆ ಆಗಿದ್ದಾರೆ. ಗೋಪ-ಗೋಪಿಯರು ಇಲ್ಲೇ ಇದ್ದಾರೆ. ಸತ್ಯಯುಗದಲ್ಲಿ ಇರುತ್ತಾರೇನು. ಇದು ಈಶ್ವರೀಯ ನರ್ತನ ಆಗಿದೆ. ಮತ್ತೆ ಅಲ್ಲಿಗೆ ಹೋಗಿ ರಾಜಕುಮಾರ-ಕುಮಾರಿಯರ ಜೊತೆ ನರ್ತನ ಮಾಡುತ್ತೀರಿ. ನೀವು ಮಕ್ಕಳು ಬಹಳ ಅದೃಷ್ಟವಂತರಾಗಿದ್ದೀರಿ, ಕೇವಲ ತಂದೆಗೆ ಬಲಿ ಆಗಿಬಿಡಿ. ಬಾಬಾ ನಾನು ನಿನ್ನವನು ಅಂದಾಗ ಏಕೆ ಬಲಿಹಾರಿ ಆಗುವುದಿಲ್ಲ. ನೀವು ನಮ್ಮನ್ನು ಸ್ವರ್ಗಕ್ಕೆ ಮಾಲೀಕರನ್ನಾಗಿ ಮಾಡುತ್ತೀರಿ. ಬಹಳ ಜಬರ್ದಸ್ತ್ ಸಂಪಾದನೆ ಆಗಿದೆ. ಬಾಕಿ ಎಲ್ಲಾ ಸ್ಮಶಾನ ಆಗಿದೆ. ಸ್ಮಶಾನ ನಂತರ ಪರಿಸ್ತಾನವಾಗುತ್ತದೆ. ದೆಹಲಿ ಪರಿಸ್ತಾನ ಆಗಿತ್ತು, ಪರಿಗಳು ಇರುವ ಸ್ಥಾನವಾಗಿತ್ತು. ದೇವೀ-ದೇವತೆಗಳಿಗೆ ಪರಿಸ್ತಾನದ ಪರಿಗಳು ಎಂದು ಕರೆಯಲಾಗುತ್ತದೆ. ಈಗ ಸ್ಮಶಾನವಾಗಿದೆ. ಓಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸದಾ ಬ್ರಹ್ಮಾಂಡ ಮತ್ತು ವಿಶ್ವಕ್ಕೆ ಮಾಲೀಕರಾಗುತ್ತಿದ್ದೇವೆ ಎನ್ನುವ ನಶೆ ಇರಬೇಕು. ನಾವು ಬ್ರಾಹ್ಮಣರೇ ಪುನಃ ದೇವತೆ ಆಗುತ್ತೇವೆ.

2. ತಮ್ಮ ಅವಸ್ಥೆಯನ್ನು ಶಕ್ತಿಶಾಲಿ ಮಾಡಿಕೊಳ್ಳಬೇಕು. ಮೃತ್ಯುವಿಗೆ ಹೆದರಬಾರದು. ತಂದೆಯ ನೆನಪಿನಲ್ಲಿ ಇರಬೇಕು. ಧಾರಣೆ ಮಾಡಿ ಅನ್ಯರಿಗೆ ಸೇವೆ ಮಾಡಬೇಕು.

ವರದಾನ: ನೆಪಗಳನ್ನು ಹೇಳುವ ಆಟವನ್ನು ಸಮಾಪ್ತಿ ಮಾಡುವಂತಹ ಮಾಸ್ಟರ್ ದಾತಾತನದ ಸ್ವಮಾನಧಾರಿ ಭವ

ಯಾವ ಮಕ್ಕಳಿಗೆ ನೆಪಗಳನ್ನು ಹೇಳುವ ಆಟ ಬರುವುದು ಅವರು ಹೇಳುತ್ತಾರೆ- ಹೀಗಾಗುವುದಿಲ್ಲ, ಹಾಗಾಗುವುದಿಲ್ಲ, ಇವರು ಹೀಗೆ ಮಾಡಿದರು, ಸಂಧರ್ಭವೇ ಹಾಗಿತ್ತು....... ಈಗ ಈ ನೆಪಗಳನ್ನು ಹೇಳುವ ಭಾಷೆಯನ್ನು ಸಮಾಪ್ತಿ ಮಾಡಿ ದೃಢ ಪ್ರತಿಜ್ಞೆ ಮಾಡಿ ಹೀಗಾಗಲಿ ಅಥವಾ ಹಾಗಾಗಲಿ ಆದರೆ ನಾನಂತೂ ತಂದೆಯಂತೆ ಆಗಬೇಕು. ಇನ್ನೊಬ್ಬರು ಸಹಯೋಗ ಕೊಟ್ಟರೆ ನಾನು ಸಂಪನ್ನ ಆಗುವೆ, ಅಲ್ಲ. ಈ ತೆಗೆದುಕೊಳ್ಳುವ ಬದಲು ಮಾಸ್ಟರ್ ದಾತರಾಗಿ ಸಹಯೋಗ, ಸ್ನೇಹ, ಸಹಾನುಭೂತಿ ಕೊಡುವುದೇ ತೆಗೆದುಕೊಳ್ಳುವುದಾಗಿದೆ. ಈ ಭಾವನೆಯಿಂದ ಮಾಸ್ಟರ್ ದಾತಾತನದ ಸ್ವಮಾನಧಾರಿಯಾಗಿಬಿಡುವಿರಿ.

ಸ್ಲೋಗನ್: ಯಾವಾಗ ನಾನು ಮತ್ತು ನನ್ನತನದ ಭಾವನೆಗಳಿಂದ ವೈರಾಗ್ಯ ವಿರುವುದು ಆಗ ಹೇಳಲಾಗುವುದು ಬೇಹದ್ದಿನ

ವೈರಾಗಿ.